ಶ್ರೀ ಎ೯. ಚಂದ್ರಶೇಖರ್,—ಇದನೇ ಪರಶ್ನೆನಲ್ಲಿಯೇ ಇದ, ಓದಿ ನೋಡಿ.

" ಸದರಿ ಜಮೀನಿನಲ್ಲಿ ಸಮೂಹ ವಸತಿ ಗೃಹಗಳ ಯೋಜನೆಯು ರೂಪುರೇಷೆ, ನಕ್ಷೆ ಯನ್ನು ನಗರ ಯೋಜನಾ ಪ್ರಾಧಿಕಾರ ಮಂತ್ತು ಅಭಿವೃದ್ಧಿ ಮಂಡಲಿ, ಮೈಸೂರು ಇವರುಗಳಿಗೆ ನಿಗದಿತ ಅಭಿವೃದ್ಧಿ ಶುಲ್ಕ ಇತ್ಯಾದಿ ಪಾವತಿ ಮಾಡಿ ಅನುಮೋದನೆ ಪಡೆಯಂತಕ್ಕದ್ದು ".

ಆಗ ಯಾವ್ಯಾವ ಟ್ಯಬಿಲ್ಡಿಂಗ್ ಆಡ್ಡ ಬರುತ್ತದೆ ಅದಕ್ಕೆ ತಕ್ಕಂತೆ ಲೇಔಟ್ ಪ್ಲಾನ್ ಅನ್ನು ಅವರು ಸ್ಯಾಂಕ್ಷನ್ ಮಾಡುತ್ತಾರೆ. ಆದ್ದರಿಂದ ನಗರ ಯೋಜನ ಪ್ರಾಧಿಕಾರದ ಅಡಿಯಲ್ಲೇ ಇದು ಮಂಜೂರಾತಿ ಪಡೆಯುವುದರಿಂದ ಅದನ್ನೆಲ್ಲ ಅವರು ನೋಡುತ್ತಾರೆ. ಎರಡನೇಯದು ಸಿ. ಐ. ಟಿ. ಬಿ. ಯವರು ತೆಗೆದುಕೊಳ್ಳಬಹುದಾಗಿತ್ತು ಎಂದು ಇವರು ಹೇಳಿದ್ದಾರೆ. ಆದರೆ ಅರ್ಜಿದಾರರು ಏನು ಹೇಳಿದ್ದಾರೆ, ಅವರ ಸಂಕಷ್ಟಗಳು ಏನಿದಯೋ ಗೊತ್ತಿಲ್ಲ. ಇಂತವರಿಗೇ ಕೊಡಬೇಕು ಎಂದು ಅರ್ಜಿಯೇ ಇರುವುದರಿಂದ ಅದರ ಮೇಲೆ ನಾವು ಮಾಡಿರುವುದು ಇದೆ.

ಅಧ್ಯಕ್ಷರು.—ಈಗ ಕಂದಾಯ ಮಂತ್ರಿಗಳಿಂದ ಶ್ರೀ ಶಿವನಂಜಪ್ಪನವರ ಗಮನ ಸೆಳೆಯುವ ಸೂಚನೆಗೆ ಉತ್ತರ. ಗಮನ ಸೆಳೆದಿದ್ದಾರೆ, ನೀವು ಉತ್ತರ ಹೇಳಿ.

ಶ್ರೀ ವೇದಾಂತ ಹೆಮ್ಮಿಗೆ.—ಒಂದು ಕ್ಲಾರಿಫಿಕೇಶನ್ ಇದೆ.

ಅಧ್ಯಕ್ಷರು.—ಇಲ್ಲ ನೀವು ಸಾಕಷ್ಟು ವಿವರಗಳನ್ನು ಕೇಳಿದ್ದೀರಿ.

ಶ್ರೀ ವೇದಾಂತ ಹೆಮ್ಮಿಗೆ.—ನಮಗೆ ಮೈಸೂರಿನ ಬಗ್ಗೆ ಬಹಳಕಾಳಜಿ ಇರುವುದರಿಂದ ಕೇಳುತ್ತೇವೆ ದಯವಿಟ್ಟು ಕೇಳಿ. ಅವರಿಗೆ ಕೊಡತಕ್ಕಂಥ ಒಂದು ಕೋಟಿಯೋ, ೬೦ ಲಕ್ಷವೋ, ೫೦ ಲಕ್ಷವೋ, ಅದನ್ನು ಮೈಸೂರು ನಗರಾಭಿವೃದ್ಧಿ ಸಮಿತಿಗೇ ಪಾವತಿ ಕೊಡುತ್ತೀರಾ? ನಾವು ಅದನ್ನು ತೆಗೆದುಕೊಳ್ಳುವುದಕ್ಕೆ ರೆಡಿಯಾಗಿದ್ದೇವೆ.

ಶ್ರೀ ಎ೯. ಚಂದ್ರಶೇಖರ್.—ಅರ್ಜಿದಾರರ ಹಕ್ಕು ಇದೆ. ಅವರು ಕೇಳಿದ್ದಾರೆ, ಪರವಾನಗಿಯನ್ನು ಕೊಟ್ಟಿದ್ದೇವೆ. ಈಗ ಇದು ಮೊದಲೇ ಆಗಿದ್ದರೆ ಇದನ್ನು ಪರಿಶೀಲಿಸಬಹುದಿತ್ತು.

2 ಗ್ರಾಮಲೆಕ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿದವರಿಗೆ ನಿವೃತ್ತಿ ವೇತನ ನೀಡುವ ಬಗ್ಗೆ

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ನಾನು ಗ್ರಾಮಲೆಕ್ಕಾಧಿಕಾರಿಯಾಗಿ ಹಿಂದೆ ಸೇವೆ ಸಲ್ಲಿಸಿದವರಿಗೆ ನಿವೃತ್ತಿ ವೇತನ ನೀಡುವುದರ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಮತ್ತು ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಶಾಶ್ವತಸೇವೆಯಲ್ಲಿರುವವರಾಗಿ ೧-೨-೬೩ ರಿಂದ ಕೆಲಸದಲ್ಲಿ ಮುಂದುವರೆದು ಗ್ರಾಮಲೆಕ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿರುವವರಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡಬೇಕೆಂದು ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ.

೧೯೬೧ರ ಕರ್ನಾಟಕ ಗ್ರಾಮಾಧಿಕಾರಿಗಳ ರದ್ದಿಯಾತಿ ಕಾಯಿದೆ ಪ್ರಕಾರ ಅನುವಂಶಿತ ಮತ್ತು ಇತರೇ ಗ್ರಾಮಾಧಿಕಾರಿಗಳ ಹುದ್ದೆಗಳನ್ನು ರದ್ದುಗೊಳಿಸಲಾಯಿತು ಈ ಕಾಯಿದೆ ೧-೨-೧೯೬೩ ರಿಂದ ಜಾರಿಗೆ ಬಂದಿದೆ.

ಅನುವಂಶಿತ ಹಾಗೂ ಇತರೇ ಗ್ರಾಮಾಧಿಕಾರಿಗಳ ಹುದ್ದೆಗಳನ್ನು ರದ್ದುಗೊಳಿಸುವಾಗ ಅನುವಂಶಿತ ಗ್ರಾಮಾಧಿಕಾರಿಗಳನ್ನು ಗ್ರಾಮಾಲೆಕ್ಕಾಧಿಕಾರಿಯಾಗಿ ನೇಮಿಸಲು ಅವಕಾಶವಿತ್ತು ೧೯೬೧ ಮತ್ತು ೧೯೭೦ರ ಶ್ರೇಣಿ ಮತ್ತು ನೇಮಕಾತಿ ನಿಯಮಗಳ ಪ್ರಕಾರ, ಅರ್ಹತೆಯುಳ್ಳ ಅನುವಂಶಿತ ಗ್ರಾಮಾಧಿಕಾರಿಗಳನ್ನು ಗ್ರಾಮಲೆಕ್ಕಾಧಿಕಾರಿಗಳನ್ನಾಗಿ ನೇಮಿಸಲು ಅವಕಾಶವಿತ್ತು. ನಿಯಮಗಳ ಪ್ರಕಾರ ನೇಮಕಗೊಂಡ ಶಾಶ್ವತಸೇವೆಗಾರರುಗಳಿಗೆ ಸರ್ಕಾರಿ ಆದೇಶ ಸಂಖ್ಯೆ. ಆರ್‌ಡಿ ೧೮೨ ಎಂವಿಎಸ್ ೭೭, ದಿನಾಂಕ ೨೯-೧೧-೭೯ರನ್ವಯ ನಿವೃತ್ತಿ ವೇತನವನ್ನು ನೀಡಲು ಆದೇಶಿಸಲಾಯಿತು, ಈ ಆದೇಶವನ್ನು ಆರ್‌ಡಿ ೨೫೬ ಎಂವಿಎಸ್ ೮೪, ದಿನಾಂಕ ೨೧-೧೧-೮೫ರ ಆದೇಶದಲ್ಲಿ ಪರಿಷ್ಕರಿಸಲಾಗಿದೆ, ಅದರಂತೆ ನೇಮಕಾತಿ ನಿಯಮಗಳಂತೆ ಸಕ್ರಮವಾಗಿ ನೇಮಕವಾಗದೆ ಇರುವ ಶಾಶ್ವತಸೇವೆಗಾರರುಗಳಿಗೆ ನಿವೃತ್ತಿ ವೇತನ ನೀಡಲು ಬರುವುದಿಲ್ಲ.

ಆದರೆ, ಶ್ರೇಣಿ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನೇಮಕ ಹೊಂದದೆ ಇರುವ ಶ್ಯಾನುಭೋಗರುಗಳು ಕೂಡ ನಿವೃತ್ತ ವೇತನವನ್ನು ಪಡೆಯುತ್ತಿದ್ದಾರೆ. ಕೆಲವು ನ್ಯಾಯಾಲಯಗಳ ಆದೇಶಗಳಂತೆ ತಾತ್ಕಾಲಿಕವಾಗಿ ಕೆಲವು ಶ್ಯಾನುಭೋಗರುಗಳು ಗ್ರಾಮ ಲೆಕ್ಕಾಧಿಕಾರಿಗಳಾಗಿ ಮುಂದುವರೆದಿದ್ದಾರೆ. ಇಂತಹ ಶ್ಯಾನುಭೋಗರುಗಳನ್ನು ೧೯೬೪ರ ಕರ್ನಾಟಕ ಭೂ ಕಂದಾಯ ಕಾಯಿದೆಯನ್ವಯ ಗ್ರಾಮಲೆಕ್ಕಾಧಿಕಾರಿಗಳಾಗಿ ತಮ್ಮ ಹುದ್ದೆಗಳಲ್ಲಿ ಸಕ್ರಮವಾಗಿ ಶ್ರೇಣಿ ಮತ್ತು ನೇಮಕ ನಿಯಮಗಳ ಪ್ರಕಾರ ನೇಮಕ ಹೊಂದಿದ ಗ್ರಾಮಲೆಕ್ಕಾಧಿಕಾರಿಗಳನ್ನು ನೇಮಕ ಮಾಡುವವರೆಗೆ ಸೇವೆಯಲ್ಲಿ ಮುಂದುವರೆಸಲಾಗಿತ್ತು.

ಈ ರೀತಿ ಕೆಲವು ಶ್ಯಾನುಭೋಗರುಗಳನ್ನು ಗ್ರಾಮಲೆಕ್ಕಾಧಿಕಾರಿಗಳಾಗಿ ಮುಂದುವರೆದವರಿಗೆ ೨೧-೧೧-೧೯೫೫ರ ಸರ್ಕಾರಿ ಆಜ್ಞೆಯಂತೆ ನಿವೃತ್ತಿ ವೇತನವನ್ನು ಪಡೆಯಲು ಅವಕಾಶವಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ ೧೯೬೧ ಮತ್ತು ೧೯೭೮ರ ಶ್ರೇಣಿ ಮತ್ತು ನೇಮಕಾತಿ ನಿಯಮಂಗಳ ಪ್ರಕಾರ ಅರ್ಹತೆಯುಳ್ಳ ಶ್ಯಾನುಭೋಗರುಗಳನ್ನು ಗ್ರಾಮಾಲೆಕ್ಕಾಧಿಕಾರಿಗಳಾಗಿ ನೇಮಿಸಿದವರಿಗೆ ಮಾತ್ರ ನಿವೃತ್ತಿ ವೇತನವನ್ನು ನೀಡಬಹುದು. ಆದರೆ ನ್ಯಾಯಾಲಯಗಳ ತೀರ್ಪಿನಂತೆ ತಾತ್ಕಾಲಿಕವಾಗಿ ಗ್ರಾಮಾಲೆಕ್ಕಾಧಿಕಾರಿಗಳಾಗಿ ಶ್ಯಾನುಭೋಗರುಗಳು ಮುಂದುವರೆದು ಸಕ್ರಿಯವಾಗಿ ನಿಯಮಗಳಂತೆ ನೇಮಕವಾಗದೆ ಇರುವವರಿಗೆ ನಿವೃತ್ತಿ ವೇತನವನ್ನು ನೀಡಲು ಬರುವುದಿಲ್ಲ. ಯಾರಿಗೂ ಹಿಂದೆ ಶ್ಯಾನಭೋಗರಾಗಿ ಕೆಲಸ ಮಾಡಿದ ಅವಧಿಯನ್ನು ನಿವೃತ್ತಿ ವೇತನಕ್ಕಾಗಿ ಪರಿಗಣಿಸಲು ಅವಕಾಶವಿಲ್ಲ.

ಸಕ್ರಮವಾಗಿ ಗ್ರಾಮಾಲೆಕ್ಕಾಧಿಕಾರಿಯಾಗಿ ನೇಮಕ ಹೊಂದದ ಕೆಲವು ಶ್ಯಾನುಭೋಗರುಗಳು ಉಚ್ಚ ನ್ಯಾಯಾಲಯ, ಕರ್ನಾಟಕ ಆಡಳಿತ ನ್ಯಾಯಮಂಡಳಿ ಹಾಗೂ ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿ ಮತ್ತು ಮೇಲ್ಮನವಿಗಳನ್ನು ಸಲ್ಲಿಸಿದ್ದಾರೆ. ನ್ಯಾಯಾಲಯಗಳಲ್ಲಿ ಅಂತಿಮ ತೀರ್ಮಾನ ಬರುವವರೆಗೂ ತಾತ್ಕಾಲಿಕವಾಗಿ ಗ್ರಾಮಾ ಲೆಕ್ಕಾಧಿಕಾರಿಗಳಾಗಿ ಮುಂದುವರೆದ ಶ್ಯಾನುಭೋಗರುಗಳಿಗೆ ನಿವೃತ್ತಿ ವೇತನ ನೀಡಲು ಸಾಧ್ಯವಿಲ್ಲವೆಂದು ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

† ಶ್ರೀ ಜಿ. ಎಸ್. ಶಿವಸಂಜಪ್ಪ—ಮಾನ್ಯ ಅಧ್ಯಕ್ಷರೇ, ಎಲ್ಲರಿಗೂ ಸಹಾಯ ಮಾಡುತ್ತೇವೆಂದು ಜನತಾ ಪಕ್ಷದವರು ಹೇಳಿಕೊಂಡಿದ್ದಾರೆ. ಈ ಅನುವಂಶಿತ ರದ್ದತಿಯಿಂದ ಇವರುಗಳು ಹುದ್ದೆಗಳನ್ನು ಕಳೆದುಕೊಳ್ಳಬೇಕಾಯಿತು. ಈಗಿನ ವಿಲೇಜ್ ಅಕೌಂಟೆಂಟ್‌ಗಳಿಗೆ ಲೆಕ್ಕ ಹಾಕಿದರೆ ಈ ಶ್ಯಾನುಭೋಗರೇ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಆದರೆ ಇವತ್ತು ಅವರನ್ನು ಮನೆಗೆ ಕಳುಹಿಸಿದ್ದೀರಿ. ಇವರುಗಳಲ್ಲಿ ಈಗಾಗಲೇ ೧೨೦ಕ್ಕೆ ೫೦ ಜನ ತೀರಿಕೊಂಡಿದ್ದಾರೆ. ಇನ್ನು ಕೆಲವೇ ಜನ ಉಳಿದುಕೊಂಡಿದ್ದಾರೆ. ಕೆಲವರನ್ನು ಡೀಮ್ಡ್ ಅಕೌಂಟೆಂಟ್ಸ್ ಆಗಿ ತೆಗೆದುಕೊಂಡಿದ್ದಿರಿ. ಅವರಿಗೂ ಸಿಕ್ಕಿಲ್ಲ. ಡಿವಿಜನಲ್ ಕಮೀಷನರ್ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ತೆಗೆದುಕೊಂಡಿರುವ ತೀರ್ಮಾನ ಇವರ ಪರವಾಗಿಯೇ ಇದೆ. ನೀವು ಇವತ್ತು ಹೊಸ ರಿಪೋರ್ಟ್ ಕೊಡುತ್ತಿದ್ದೀರಿ. ಇದು ವಾಸ್ತವಾಂಶಕ್ಕೆ ಸರಿಯಾಗಿ ಇಲ್ಲ. ಒಂದು ವೇಳೆ ನೀವು ಇದೇ ತೀರ್ಮಾನಕ್ಕೆ ಬರುವುದಾದರೆ, ಇದನ್ನು ಮತ್ತೊಮ್ಮೆ ರೀ ಕನ್‌ಸಿಡರ್ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಕೂಡ ಸೇವೆ ಸಲ್ಲಿಸಿದ್ದಾರೆ. ಬಹಳಷ್ಟು ಜನ ಇವತ್ತು ನಿರ್ಗತಿಕರಾಗಿದ್ದಾರೆ, ಅವರುಗಳು ಭಿಕ್ಷೆ ಬೇಡುವಂಥ ಪರಿಸ್ಥಿತಿ ಬಂದಿದೆ. ಇವರಿಗೂ ನಿವೃತ್ತಿ ವೇತನವನ್ನು ಕೊಟ್ಟರೆ ನಿಜವಾಗಿಯೂ ನಿಮಗೆ ಒಳ್ಳೆಯದಾಗುತ್ತದೆ. ಈ ಅಬಾಲಿಷನ್ ಬಂದತಕ್ಷಣ ಕೆಲವು ಶ್ಯಾನುಭೋಗರುಗಳನ್ನು, ಅರ್ಹತೆ ಇದ್ದವರನ್ನು ಡೀಮ್ಡ್ ಅಕೌಂಟೆಂಟ್ ಆಗಿ ಮುಂದುವರಿಸುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಅವರ ಬಗ್ಗೆ ನಾನು ಕೇಳುತ್ತಿದ್ದೇನೆ. ಅವರನ್ನು ಡೀಮ್ಡ್ ಅಕೌಂಟೆಂಟ್ ಆಗಿ ಪರಿಗಣನೆ ಮಾಡಿ, ಕೆಲಸ ಮಾಡಿಸಿಕೊಂಡಿದ್ದೀರಿ. ಇಂತಹವರ ಬಗ್ಗೆ ಕನಿಕರ ಇರಲಿ. ಅವರ ರೆಪ್ರಸೆಂಟೇಷನ್ ನಿಮ್ಮ ಗವರ್ನಮೆಂಟ್ ಆರ್ಡರ್, ಡಿವಿಜನಲ್ ಕಮಿಷನರ್ ರಿಪೋರ್ಟ್ ಹಾಕಿರತಕ್ಕಂಥ ಕಾಪಿಯನ್ನು ಅಧ್ಯಕ್ಷರ ಮೂಲಕ ತಮಗೆ ಕಳುಹಿಸಿಕೊಡುತ್ತಿದ್ದೇನೆ. ನೀವು ಏನುತೀರ್ಮಾನ ತೆಗೆದುಕೊಂಡಿದ್ದೀರಿ ಇದನ್ನು ಪುನರ್ ಪರಿಶೀಲನೆ ಮಾಡಬೇಕು ಸೆಕ್ರೆಟರಿಯವರು ಎಲ್ಲಾ ರೆಕಾರ್ಡ್ಸ್‌ಗಳನ್ನೂ ಸರಿಯಾಗಿ ನೋಡದೇ ಆರ್ಡರ್ ಮಾಡಿದ್ದಾರೆ. ದಯವಿಟ್ಟು ಇದನ್ನು ಮರು ಪರಿಶೀಲನೆ ಮಾಡಿ ಇವರು ಬಹಳ ಕಡಿಮೆ ಜನ ಇದ್ದಾರೆ ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ. ಇವರ ಶಾಪವನ್ನು ನೀವು ಏಕೆ ಹೊತ್ತುಕೊಳ್ಳುತ್ತೀರಿ.

ಎಲ್ಲರಿಗೂ ಸಹಾಯ ಮಾಡುತ್ತೇವೆಂದು ಹೊರಟ್ಟಿದ್ದೀರಿ, ಅದರಂತೆ ಇವರಿಗೂ ಸಹಾಯ ಮಾಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನಿನ ಅಡಚಣೆ ಇದೆ ಎಂದು ಹೇಳಿದ್ದೇನೆ. ಆದರೂ ಅವರು ಡಿವಿಜನಲ್ ಕಮಿಷನರ್ ಹಾಗೂ ಹಿಂದಿನ ಅಧಿಕಾರಿಗಳು ಆಜ್ಞೆಗಳನ್ನು ಮಾಡಿರುತ್ತಾರೆ ಎಂದು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇನೆ.ಅವರು ಅಪ್ಲಿಕೇಶನ್ ಕಳಂಹಿಸಿಕೊಡಲಿ.

ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು,—ಮಾನ್ಯ ಖರ್ಗೆಯವರೇ, ನಿಯಮ ೩೫೪ರ ವಿಷಯಗಳನ್ನು ಈಗ ತೆಗೆದುಕೊಳ್ಳೋಣವೇ ಅಥವಾ ನಾಳೆ ಇಡೋಣವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಳೆ ತೆಗೆದುಕೊಳ್ಳಿ, ಏತಕ್ಕೆಂದರೆ ನಿಯಮ ೬೮ರಲ್ಲಿ ಪ್ರಸ್ತಾಪಿಸಲ್ಪಡುವ ವಿಚಾರ ಬಹಳ ಮುಖ್ಯವಾದುದು.

ಅಧ್ಯಕ್ಷರು.—೩೫೪ನೇ ನಿಯಮದ ವಿಷಯಗಳನ್ನು ನಾಳೆ ತೆಗೆದುಕೊಳ್ಳೋಣ. ಈಗ ನಿಯಮ ೬೮ರ ಮೇರೆಗೆ ಚರ್ಚೆ. ಶ್ರೀಮತಿ ನಾಗರತ್ನಮ್ಮನವರು ಹಾಗೂ ಇತರರಿಂದ ಕೇರಳದ ರಶೀದ್ ಎಂಬ ವಕೀಲರ ಕೊಲೆ ಪ್ರಕರಣದಲ್ಲಿ ಮಾಜಿ ಗೃಹಸಚಿವರ ರಾಜೀನಾಮೆಯಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸುವುದು.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ ಸಭೆಯಲ್ಲಿ ಏನೋ ಒಂದು ಕಾನ್‌ಫೆರೆನ್ಸ್ ನಡೆಯುತ್ತಿದೆ

ಅಧ್ಯಕ್ಷರು.—ಅವರ ವಿಚಾರ ನಿಮಗೆ ಏತಕ್ಕೆ?

(ಗೊಂದಲ)

ಶ್ರೀ ವಿನಯಕುಮಾರ್ ಸೊರಕೆ.—ಅವರೆಲ್ಲಾ ಒಂದೇ ಕಡೆ ಸೇರಿ ಏನೋ ಮಾಡುತ್ತಿದ್ದಾರೆ. ಅಲ್ಲಿ ಏನೋ ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು.—ಅವರು ಒಟ್ಟಾಗಿರುವುದು ನಿಮಗೆ ಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಎಲ್ಲರನ್ನೂ ಕರೆಯುವುದು, ಸಿಗ್ನೇಚರ್ ಮಾಡಿಸುವುದು ಇದೆಲ್ಲ ಇಲ್ಲಿ ಏತಕ್ಕೆ? This House is meant for something else, i.e. for discussion and not for collecting signatures whether this side or that side

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ನೀವು ರಾತ್ರಿ ಅವರನ್ನು ಹುಡುಕಾಡುವುದು ಬೇಡ ಎಂದು ಎಲ್ಲರೂ ಒಟ್ಟಾಗಿ ಇಲ್ಲೇ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ನಾವು ಹುಡುಕಾಡುವುದಿಲ್ಲ. ನೀವೇ ಯಾರ್ಯಾರು ಎಲ್ಲೆಲ್ಲಿದ್ದಾರೆ ಎಂದು ಹುಡುಕಾಡುತ್ತೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ,—ಆ ಹವ್ಯಾಸ ನಮಗಿಲ್ಲ. ನಮಗೆ ಬೇಕಾಗಿಲ್ಲ ನಮಗೆ ಏತಕ್ಕೆ ಆ ದುರಾದೃಷ್ಟದ ಹಣೆಬರಹ.